ಪ್ರಕಟಣೆ

ಉಗಾದಿ ಪ್ರಯುಕ್ತ ಚಹಾಕೂಟಕ್ಕೆ ಆಹ್ವಾನ

ಅಧ್ಯಕ್ಷರು: ಈ ದಿನ ಸಂಜೆ 4 ಗಂಟೆಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಉಗಾದಿ ಹಬ್ಬದ ಪ್ರಯುಕ್ತ ಕರ್ನಾಟಕ ವಿಧಾನಮಂಡಲದ ವತಿಯಿಂದಾಗಿ ಚಹಾಕೂಟ ಏರ್ಪಾಡು ಮಾಡಿದ್ದೇವೆ. ಕರ್ನಾಟಕ ವಿಧಾನ ಮಂಡಲದ ಕಳೆದ 4 ವರ್ಷಗಳಿಂದ ಮೂರು ವಿಶೇಷ ಸಂದರ್ಭಗಳಲ್ಲಿ ಉಗಾದಿ, ರಂಜಾನ್‌ಮತ್ತೆ ಕ್ರಿಸ್ಮಸ್ ಹಬ್ಬಗಳಲ್ಲಿ ಮತೀಯ ಸಾಮರಸ್ಯ ಕಾಪಾಡುವ ದೃಷ್ಟಿಯಿಂದ ಮತ್ತು ರಾಷ್ಟ್ರೀಯ ಸಮಗ್ರತೆಯನ್ನು ಎತ್ತಿಹಿಡಿಯುವ ದೃಷ್ಟಿಯಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳುತ್ತಾ ಬಂದಿದೆ. ಈ 10ನೆಯ ವಿಧಾನಸಭೆಯ ಅಧ್ಯಕ್ಷನಾಗಿ ನನಗೆ ಇದು ಕಡೇ ಅವಕಾಶ. ಸಂಜೆ 4 ಗಂಟೆಗೆ ಮಾನ್ಯ ಸಭಾನಾಯಕರು ಸಚಿವ ಸಂಪುಟದ ಎಲ್ಲಾ ಗೌರವಾನ್ವಿತ ಸದಸ್ಯರು ವಿರೋಧ ಪಕ್ಷದ ನಾಯಕರು ವಿವಿಧ ವಿರೋಧ ಪಕ್ಷದ ಮುಖಂಡರು ಎಲ್ಲಾ ಗೌರವಾನ್ವಿತ ಸದಸ್ಯರು, ಪತ್ರಿಕಾ ಪ್ರತಿನಿಧಿಗಳು ಈ ಚಹಾಕೂಟದಲ್ಲಿ ಪಾಲ್ಗೊಳ್ಳಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು 22-3-1999ರ ಸೋಮವಾರ ಬೆಳಿಗ್ಗೆ 11ಗಂಟೆಗೆ ಪುನಃ ಸೇರುವುದು.

(ಸದನವು 12.40ಕ್ಕೆ ಮುಂದೂಡಲ್ಪಟ್ಟು 22-3-99ನೇ ಸೋಮವಾರ ಬೆಳಿಗ್ಗೆ 11 ಘಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಅರ್ಪಣೆ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)